# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ,

# ಬೆಂಗಳೂರು-560003

## ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ ಪೂರ್ವ ಸಿದ್ಧತಾಪ್ರಶ್ನೆ ಪತ್ರಿಕೆ ಪೆಬ್ರವರಿ - 2022

**ತರಗತಿ :10** **ವಿಷಯ: ಕನ್ನಡ 01-K** **ಅಂಕಗಳು:100**

## ಮಾದರಿ ಉತ್ತರ ಪತ್ರಿಕೆ

| ಮು.ಪ್ರ ಪ್ರ.ಸಂ | ಪ್ರಶ್ನೋತ್ತರಗಳು | ಅಂಕಗಳ ಹಂಚಿಕೆ |
|---|---|---|
| I. | ಬಹು ಆಯ್ಕೆ ಪ್ರಶ್ನೆಗಳು | 1x6=6 |
| 1. | ಷಣ್ಮುಖ ಪದವು ಈ ಸಂಧಿಯದ್ದಾಗಿದೆ.<br>ಡಿ) ಅನುನಾಸಿಕ ಸಂಧಿ | 1. |
| 2. | ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.<br>ಬಿ) ಉದ್ಧರಣ ಚಿಹ್ನೆ | 1. |
| 3. | ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ<br>ಬಿ) ಸಾಮಾನ್ಯ ವಾಕ್ಯ | 1. |
| 4. | ಬೆಟ್ಟದಾವರೆ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.<br>ಎ) ತತ್ಪುರುಷ ಸಮಾಸ | 1. |
| 5. | ಸಾವಿತ್ರಿಯೊಳ್ ಪದದಲ್ಲಿರುವ ವಿಭಕ್ತಿ<br>ಸಿ) ಸಪ್ತಮೀ | 1. |
| 6. | ಕ್ರಿಯಾರ್ಥಕಾವ್ಯಯಕ್ಕೆ ಉದಾಹರಣೆ ಇದು<br>ಬಿ) ಸಾಕು | 1. |
| II. | ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೇ ಪದಕ್ಕೆ ಸರಿಯಾದ ಉತ್ತರ ಬರೆಯಿರಿ: | 1X4=4 |

| | | |
|---|---|---|
| 7. | ಹಳು : ಕಾಡು :: ಕೂರ್ಮೆ : ಸ್ನೇಹ | 1. |
| 8 | ಅರ್ಕ. : ಎಕ್ಕ :: ದೃಷ್ಟಿ : ದಿಟ್ಟಿ | 1. |
| 9. | ಹ್ರಸ್ವ. : ೦೬. :: ಅನುನಾಸಿಕಗಳು : ೦೫ | 1. |
| 10 | ಮಾಡಲಿ : ವಿಧ್ಯರ್ಥಕ. :: ಮಾಡನು : ನಿಷೇದಾರ್ಥಕ | 1X7=7 |
| III. | ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:- | |
| 11. | ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?<br>ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಬೇಕಾದ ಔಷಧ ಮತ್ತು ಶಾಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನುಭದ್ರವಾಗಿ ಹಿಡಿದುಕೊಂಡಿದ್ದನು. | 1 |
| 12. | ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯನವರಿಗೆ ಅವರಿಗೆ ಯಾವ ಪದವಿಯನ್ನ ನೀಡಿ ಗೌರವಿಸಿತು?<br>ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು. | 1 |
| 13. | ಮನೆ ಮಂಚಮ್ಮ ನ ಕತೆಯನ್ನು ದೇವನೂರು ಮಹಾದೇವಿ ಅವರಿಗೆ ಹೇಳಿದ ಕವಿ ಯಾರು?<br>ಮನೆ ಮಂಚಮ್ಮ ನ ಕತೆಯನ್ನು ದೇವನೂರು ಮಹಾದೇವಿ ಅವರಿಗೆ ಹೇಳಿದ ಕವಿ ಸಿದ್ದಲಿಂಗಯ್ಯ. | 1 |
| 14. | ಹುಲಿಗೆ ಪರಮಾನಂದವಾಗಲು ಕಾರಣವೇನು ?<br>ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. | 1 |
| 15. | ಅಶ್ವಿನಿದೇವತೆಗಳ ವರಬಲದಿಂದ ಜನಿಸಿದವರು ಯಾರು?<br>ಅಶ್ವಿನಿದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ . | 1 |
| 16. | ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು ?<br>ಉ : ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು | 1 |

| | | |
|---|---|---|
| | ದುರ್ಯೋಧನ ಭೀಷ್ಮಾಚಾರ್ಯರಿಗೆ ಹೇಳುವನು . | |
| 17. | ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹೇಗೆ ನಿಂತಿವೆ | 1 |
| | ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಮೈದುಂಬಿ ನಿಂತಿವೆ | 2X10=20 |
| IV | ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ: | |
| 18. | ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು? | |
| | ಮಹಿಲೇಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ"ಅಯ್ಯೋ ಆ ಮಹಿಳೆ ಯಾವ ರೀತಿ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆಗೆ ಏನು ಸಂಭವಿಸುತ್ತಿದೆ ? ನಾನು ಈಗ ಆ ಮನೆಯ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು ?ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಂದರ್ಭದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು. | 2 |
| 19. | ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ. | |
| | ಲಕ್ಷ್ಮಣನು "ತಾಳಿಕೋ ಅಣ್ಣ ತಾಳಿಕೋ ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಧೈರ್ಯ ನೀಡುವವರು ಯಾರು ? ಎಂದು ಅಣ್ಣನನ್ನು ಸಂತೈಸಿದನು. | 2 |
| 20. | ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ. | |
| | ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡಿ ಬರುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಹೇಳಲಾಗಿದೆ . | 2 |
| 21. | ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ? | |
| | ಧರ್ಮಬುದ್ಧಿಗೆ ದುಷ್ಟಬುದ್ಧಿಯು "ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲ ಸ್ವೇಚ್ಛೆಯಿಂದ ಇರುವವರಲ್ಲ ಮತ್ತೆ ವ್ಯಾಪಾರಕ್ಕಾಗಿ ದೂರದೇಶಕ್ಕೆ ಹೋಗಬೇಕಾಗುತ್ತದೆ . ಆಕಾರಣದಿಂದ ನಿನಗೂ ನನಗೂ | |

| | | |
|---|---|---|
| | ವ್ಯಯಕ್ಕೆ(ಖರ್ಚಿಗೆ) ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನನೆಲ್ಲವನ್ನು ಇಲ್ಲಿಯೇ ಇಡೋಣ"ಎಂದು ಸಲಹೆಯಿತ್ತನು. | 2 |
| 22. | ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?<br>ಕಾಲವು ಯುಗಯುಗಗಳ ಹಣೆಬರೆಹವನ್ನು , ಅಳಿಸಿ ಹಾಕಿ ಹೊಸತನವನ್ನು (ಒಳ್ಳೆತನವನ್ನು) ಹೊಸ ಹಣೆಬರೆಹವನ್ನು ಬರೆದು ಎಲ್ಲರಿಗೂಬದಲಾವಣೆಯಾಗುವ ಒಳ್ಳೆಯ ಭಾಗ್ಯವನ್ನು ತೆರೆದು ಕೊಟ್ಟಿದೆ. ಹಾಗೆಯೇ ರೆಕ್ಕೆಯ ಬೀಸುತ , ಮೇಲಕ್ಕೆ ಹಾರುತ, ಹಾರುವ ಈ ಹೊಸಗಾಲದ ಹಸು ಮಕ್ಕಳಿಗೆ ಹೊಸ ಚೇತನವನ್ನು (ಶಕ್ತಿಯನ್ನು) ನೀಡುತ್ತ , ಉತ್ತಮ ¨ಭವಿಷ್ಯಕ್ಕಾಗಿ ಶುಭ ಹರಸಿದೆ. | 2 |
| 23. | ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ .<br>ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು , ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು . ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದು ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು . ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು . | 2 |
| 24. | ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು , ಏಕೆ ?<br>ಉತ್ತರ : ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದೂ ನಂಬುತ್ತ ನಂಬಿಸುತ್ತ , ಪರಮಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ . ಆದ್ದರಿಂದ ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು . | 2 |
| 25. | ಈ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?<br>ಉತ್ತರ: ಮಾವಿನ ಮರಗಳು ಮೈತುಂಬಿ ನಿಂತಿವೆ. ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರಾಡುತ್ತಿವೆ. ಕೋಗಿಲೆಗಳು ಮನದುಂಬಿ ಇಂಪಾಗಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ಮಲ್ಲಿಗೆ ಹೂವು ಮುಗುಳುನಗೆ ಬೀರಿದೆ. ಹೊಳೆಯುವ ರಂಗೋಲಿಯಲ್ಲಿ ಬಾಲರವಿ ಥಳಥಳಿಸುತ್ತಿದ್ದಾನೆ. ಈ ರೀತಿ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ. | 2 |

| | | |
|---|---|---|
| 26. | ಭಗತ್ ಸಿಂಗ್ ಹೇಗೆ ಅಮರನಾದನು? ?<br>ಉತ್ತರ : ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ . ಇದರ ಫಲವಾಗಿ ಮರಣ ದಂಡನೆಗೆ ಈಡಾದನು . ತನ್ನ ಸಹಚರರಾದ ಸುಖ್ ದೇವ್ , ಭಟುಕೇಶ್ವರ ದತ್ತರೊಂದಿಗೆ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು. | 2 |
| 27. | ಅಂಗಿ ಎಂಬ ಉತ್ತರ ಬರುವ ಜನಪದಗಳನ್ನು ಬರೆಯಿರಿ<br>ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ<br>ಮೈಯೊಳಗೆ ನವಗಾಯ ಒಂಬತ್ತು ತುಂಡ<br>ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ<br>ರಾಯ ರಾಯರಿಗೆಲ್ಲ ತಾನೇ ಪ್ರಚಂಡ ಎಂದು ಬಣ್ಣಿಸಿರುವುದು ಅವರ ಪ್ರಚಂಡ ಚಾತುರ್ಯವನ್ನು ಅರಿಯಬಹುದು. | 2 |
| V. | ಕೆಳಗೆ ಕೊಟ್ಟಿರುವ ಕವಿ-ಲೇಖಕರ ಕಾಲ ಸ್ಥಳ ಕೃತಿ ಮತ್ತು ಪ್ರಶಸ್ತಿ ವಾಕ್ಯದಲ್ಲಿ ಬರೆಯಿರಿ:- | 2X3=6 |
| | ಕವಿ-ಲೇಖಕರ ಕಾಲ, ಸ್ಥಳ | 1 |
| | ಕೃತಿಗಳು ಪ್ರಶಸ್ತಿಗಳು | 1 |
| 28. | ವಾಕ್ಯ ರೂಪದಲ್ಲಿ ಬರೆಯುವುದು | 1 |
| | ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ ಇವರು ಕ್ರಿ.ಶ.೧೯೦೯ ರಲ್ಲಿ ಹಾವೇರಿ ಜಿಲ್ಲೆಯಸವಣೂರು ಎಂಬ ಊರಿನಲ್ಲಿ ಜನಿಸಿದ್ದಾರೆ. ಇವರು ಸಮುದ್ರದಾಚೆಯಿಂದ ,ಸಮುದ್ರಗೀತೆಗಳು , ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರ 'ದ್ಯಾವಾ ಪೃಥಿವೀ'ಕಕೃತಿಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ , ಸಮಗ್ರ ಸಾಹಿತ್ಯಕ್ಕಾಗಿ 'ಜ್ಞಾನಪೀಠ ಪ್ರಶಸ್ತಿ' ಬಂದಿವೆ. ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದೆ. | 3 |
| 29. | ಕವಿ ಲಕ್ಷ್ಮೀಶನು ಕ್ರಿ . ಶ . ಸುಮಾರು ೧೫೫೦ ರಲ್ಲಿ ಚಿಕ್ಕಮಗಳೂರು | |

| | | |
|---|---|---|
| | ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿ ಜನಿಸಿದನು . ಇವನಿಗೆ ಲಕ್ಷ್ಮೀರಮಣ , ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದವು .<br>ಇವರು' ಜೈಮಿನಿ ಭಾರತ ' ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ . ಈತನಿಗೆ ಉಪಮಾಲೋಲ , ಕರ್ಣಾಟಕವಿಚೂತವನಚೈತ್ರ ಎಂಬ ಬಿರುದುಗಳನ್ನು ನೀಡಿಗೌರವಿಸಲಾಗಿದೆ . | 3 |
| VI. | ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸಿನ ಹೆಸರು ಬರೆಯಿರಿ. | 1X3=3 |
| | ಪ್ರಸ್ತಾರ ಹಾಕುವುದು | 1 |
| | ಗಣ ವಿಂಗಡಿಸುವುದು | 1 |
| | ಛಂದಸ್ಸು ಹೆಸರಿಸುವುದು | 1 |
| 30. | UUU U \| U– U \| – – \|<br>ನಿಮಗೆ ಪೊ\| ಡೆಮಟ್ಟಿ\| ಪೋಪೀ\|<br>UU– \| – – \| UU UU\| – – \| U U – \|<br>ಸಮಕ\| ಟ್ಟಿಂ ಬಂ\| ದೆನಹಿತ \| ರೊಳ್ ಸಂ \| ಧಿಯನೇಂ\|<br>ಛಂದಸ್ಸಿನ ಹೆಸರು : ಕಂದಪದ್ಯ | 3 |
| VII | ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಿಸಿ | 1X3=3 |
| | ಅಲಂಕಾರ: | 1 |
| | ಸಮನ್ವಯ | 1 |
| | ಲಕ್ಷಣ | 1 |
| 31. | ಮಾರಿಗೌತನವಾಯ್ತು ನಾಳಿನ ಭಾರತವು "<br>ಅಲಂಕಾರ : ರೂಪಕಾಲಂಕಾರ<br>ಉಪಮೇಯ : ಭಾರತ ಯುದ್ಧ<br>ಉಪಮಾನ : ಮಾರಿಯ ಔತಣ | |

| | | |
|---|---|---|
| | ಸಮನ್ವಯ : ಇಲ್ಲಿ ಉಪಮೇಯವಾಗಿರುವ ಭಾರತ ಯುದ್ಧಕ್ಕೂ ಉಪಮಾನವಾರಿರುವ ಮಾರಿಯ ಔತಣಕ್ಕೂ ಅಭೇದ ಕಲ್ಪಿಸಲಾಗಿದೆ . ಆದ್ದರಿಂದ ಇದು ರೂಪಕಾಲಂಕಾರವಾಗಿದೆ .<br>ಲಕ್ಷಣ : ಉಪಮೇಯ ಮತ್ತು ಉಪಮಾನ ಗಳ ನಡುವೆ ಅಬೇಧ ಕಲ್ಪನೆ ಇರುವುದರಿಂದ ಇದು ರೂಪಕಲಂಕಾರ. | 3 |
| VIII | ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದಕ್ಕೆ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ: - | 1X3=3 |
| | ಗಾದೆಯ ಅರ್ಥ | 1 |
| | ಗಾದೆಯ ತಾತ್ಪರ್ಯ | 1 |
| | ಗಾದೆಯ ವಿವರಣೆ | 1 |
| 32. | ತಾಳಿದವನು ಬಾಳಿಯಾನು ಅಥವಾ ಮನಸ್ಸಿದ್ದರೆ ಮಾರ್ಗ | 3 |
| IX. | ಈ ಕೆಳಗಿನ ಹೇಳಿಕೆ ಅಥವಾ ವಾಕ್ಯಗಳಿಗೆ ಸಂದರ್ಭದೊಂದಿಗೆ ಸ್ವಾರಸ್ಯವನ್ನು ಬರೆಯಿರಿ :- | 6X3=18 |
| | ಆಯ್ಕೆ | 1 |
| | ಸಂದರ್ಭ | 1 |
| | ಸ್ವಾರಸ್ಯ | 1 |
| 33. | ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ !"<br>ಆಯ್ಕೆ :-ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ'ಎಂಬ ಪಾಠದಿಂದ ಆರಿಸಲಾಗಿದೆ.<br>ಸಂದರ್ಭ :- ಈ ಮಾತನ್ನು ಶಬರಿಯು ರಾಮನಿಗೆ ಹೇಳುತ್ತಾಳೆ. ಶಬರಿಯ ಆತಿಥ್ಯ ಸ್ವೀಕರಿಸಿದ ರಾಮನು "ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆಯಾ . ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೇ ತಿಳಿದೆವು" ಎಂದು ಶಬರಿಗೆ ಹೇಳಿದಾಗ ಶಬರಿ, "ನಿನ್ನ ರೂಪಿನಂತೆ ಮಾತು ಕೂಡ | |

| | | |
|---|---|---|
| | ಎನಿತುದಾರವಾಗಿದೆ !".ನಾನು ಇಂದು ಧನ್ಯಳಾಗಿದ್ದೇನೆ ಎಂದು ರಾಮನಿಗೆ ಹೇಳಿದ ಸಂದರ್ಭವಾಗಿದೆ.<br><br>ಸ್ವಾರಸ್ಯ :- "ರಾಮ ನಿನ್ನ ರೂಪದಂತೆ ಮಾತು ಕೂಡ ಎಷ್ಟೊಂದು ಧಾರಾಳವಾಗಿದೆ " ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾಳೆ. | 3 |
| 34 | "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"<br><br>ಆಯ್ಕೆ : ಈ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಎಂಬ ಸಂಕಲನದಿಂದ ಆಯ್ದ ವ್ಯಾಘ್ರಗೀತೆ ಎಂಬ<br><br>ಪಾಠದಿಂದ ಆರಿಸಿಕೊಳ್ಳಲಾಗಿದೆ.<br><br>ಸಂದರ್ಭ : ಈ ಮಾತನ್ನು ಶಾನುಭೋಗರು ಗಾಡಿಯವರಿಗೆ ಕೇಳಿದರು . ಶಾನುಭೋಗರು ಪ್ರಜ್ಞೆತಪ್ಪಿ ಬಿದ್ದಿದ್ದಾಗ ಅದೇ ದಾರಿಯಲ್ಲಿ ಗಾಡಿಯಲ್ಲಿ<br><br>ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರಚಿ ಎಚ್ಚರಿಸಿದ ಸಂದರ್ಭದಲ್ಲಿ ಅವರ ಮನಸ್ಸನ್ನೆಲ್ಲಾ ವಿಸ್ಮಯ ಆವರಿಸಿತ್ತು. ತಾವು ಉಳಿದದ್ದುಹೇಗೆ? ನಿಸ್ಸಹಾಯರಾಗಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾಗ ಹುಲಿ ತಮ್ಮನ್ನು ಎಳೆದುಕೊಂಡು ಹೋಗಲಿಲ್ಲವೇಕೆ? ಎಂದು ಸ್ವಲ್ಪ ಹೊತ್ತು ಯೋಚಿಸಿಗಾಡಿಯವರನ್ನು "ನಾನನಾನು ಮುಖ ಮೇಲಾಗಿ ಬಿದ್ದಿದ್ದೆನೆ?" ಎಂದು ಕೇಳಿದ ಸಂದರ್ಭವಾಗಿದೆ.<br><br>ಸ್ವಾರಸ್ಯ : ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ ಎಂಬ ಸಮಸ್ಯೆಗೆ ಶಾನುಭೋಗರು ಕೊನೆಯವರೆಗೂ ಆಪ್ರಾಣಿ ತನ್ನ ಕುಲಧರ್ಮವನ್ನು ಪಾಲಿಸಿಕೊಂಡೇ ಬಂದಿದೆ ಎಂಬ ಉತ್ತರ ಕಂಡುಕೊಳ್ಳುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. | 3 |
| 35. | "ನಿನ್ನ ಪೞುವಗೆ ನಮ್ಮ ಕುಲಮನೆಲ್ಲಮನೞಿವ ಬಗೆ"<br><br>ಆಯ್ಕೆ : ಈ ವಾಕ್ಯವನ್ನು 'ದುರ್ಗಸಿಂಹ ಕವಿ 'ವಿರಚಿತ 'ಪಂಚತಂತ್ರ 'ಎಂಬ ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ'ಎಂಬ ಪಾಠದಿಂದ ಆರಿಸಲಾಗಿದೆ.<br><br>ಸಂದರ್ಭ : ಈ ಮಾತನ್ನು ದುಷ್ಟಬುದ್ಧಿಯ ತಂದೆ ಪ್ರೇಮಮತಿ ದುಷ್ಟಬುದ್ಧಿಗೆ ಹೇಳಿದನು .ದುಷ್ಟಬುದ್ಧಿಯು ತನ್ನ ತಂದೆಯ ಕೈಯನ್ನು | |

| | | |
|---|---|---|
| 36. | ಹಿಡಿದು, ಏಕಾಂತದಲ್ಲಿ ಕರೆದುಕೊಂಡು ಹೋಗಿ ನಡೆದ ಸಂಗತಿಯನ್ನೆಲ್ಲ ತಿಳಿಯುವಂತೆ ಹೇಳಿ "ನಿಮ್ಮ ಒಂದು ಮಾತಿನಿಂದ ನಮ್ಮ ಪರಿಜನರೆಲ್ಲರೂ (ಮನೆಯವರೆಲ್ಲರೂ) ಹಲವು ಕಾಲ ಹಸಿಯದೆ ಊಟಮಾಡಿ ಬಾಳುವಷ್ಟು ಹಣವು ಲಭಿಸುವುದು . ನೀವು ಆ ಮರದ ಪೊಟರೆಯಲ್ಲಿ ಅವಿತುಕೊಂಡು ಧರ್ಮಬುದ್ಧಿಯೇ ಹೊನ್ನನ್ನು ತೆಗೆದುಕೊಂಡು ಹೋದನು ಎಂದು ಹೇಳಬೇಕು ಎಂದಾಗ ದುಷ್ಟಬುದ್ಧಿಯ ತಂದೆ" ಪರರಧನವನ್ನು ಅಪಹರಿಸುವುದು ನಂಬಿಕೆದ್ರೋಹಮಾಡುವುದು, ಸ್ವಾಮಿದ್ರೋಹ ಮಾಡುವುದು ಇವೆಲ್ಲವೂ ಏನೇ ಮಾಡಿದರೂ ನಮ್ಮನ್ನು ಕೆಡಿಸುತ್ತವೆ. ಇಂತಹದೆಲ್ಲವನ್ನು ನೀನು ತಿಳಿದಿದ್ದು ನನ್ನನು ಸಾಕ್ಷಿ ಮಾಡಿ ಮಾತನಾಡಿಸಿ, ನನ್ನನು ಕೆಡಿಸಲು ಬಯಸಿದೆ. ""ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಳಿವ ಬಗೆ"( ನಿನ್ನ ಕೆಟ್ಟಬುದ್ಧಿಯು ನಮ್ಮ ಕುಲವನ್ನೆಲ್ಲವನ್ನು(ಮನೆತನವನ್ನೆಲ್ಲ) ಹಾಳು ಮಾಡುವ ರೀತಿಯದಾಗಿದೆ)" ಎಂದು ದುಷ್ಟಬುದ್ಧಿಗೆ ಬುದ್ಧಿ ಹೇಳಿದ ಸಂದರ್ಭವಾಗಿದೆ.<br><br>ಸ್ವಾರಸ್ಯ : ಕೆಟ್ಟಬುದ್ಧಿಯು ಕುಲವನ್ನೆಲ್ಲ ಹಾಳು ಮಾಡುತ್ತದೆ ಎಂದು ಪ್ರೇಮಮತಿ ತನ್ನ ಮಗನಾದ ದುಷ್ಟಬುದ್ಧಿಗೆ ಬುದ್ಧಿಮಾತನ್ನು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.<br><br>ಸಾರ್ವಭೌಮರಾ ನೆತ್ತಿಯ ಕುಕ್ಕಿ"<br><br>ಆಯ್ಕೆ :- ಈ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯದಿಂದ<br><br>ಆರಿಸಲಾಗಿದೆ.<br><br>ಸಂದರ್ಭ :- ಕವಿ ದ.ರಾ.ಬೇಂದ್ರೆ ಅವರು ಕಾಲದ ಸಾರ್ವಭೌಮತ್ವವನ್ನು ವಿವರಿಸಿ ವರ್ಣಿಸುವ ಸಂದರ್ಭದಲ್ಲಿ ಈ ವಾಕ್ಯವನ್ನು ಹೇಳುತ್ತಾರೆ.ಕಾಲಪಕ್ಷಿಯು ರಾಜ್ಯ, ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿ, ಕಾಲಗತಿಯಲ್ಲಿ ರಾಜ ಮಹಾರಾಜರ ಕೋಟೆ-ಕೊತ್ತಲಗಳನ್ನುನಾಶಮಾಡುತ್ತಾ, ಖಂಡ-ಖಂಡಗಳನ್ನು ತೇಲಿಸಿ-ಮುಳುಗಿಸಿ, ಸಾರ್ವಭೌಮರೆಂದು ಮೆರೆದವರ ನೆತ್ತಿಯ ಮೇಲೆ ಕುಕ್ಕಿ ಕೆಳಗೆ ಬೀಳಿಸಿ ಹೊಸಕಿ ಹಾಕಿ ಹಕ್ಕಿ ಹಾರಿಹೋಗಿದೆ ಎಂದು ಹೇಳುವ ಸಂದರ್ಭದಲ್ಲಿ ಈ ವಾಕ್ಯ ಬಂದಿದೆ.<br><br>ಸ್ವಾರಸ್ಯ :- ಕಾಲದ ಗತಿಯಲ್ಲಿ ವೈಭವದಿಂದ ಮೆರೆದ | 3 |

ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದು ಸ್ವಾರಸ್ಯ ಪೂರ್ಣವಾಗಿ ಈ ವಾಕ್ಯದಲ್ಲಿ ವರ್ಣಿತವಾಗಿದೆ. 3

37. ನಿನ್ನಪದೆಸೆಯ ಬಯಸುವವನಲ್ಲ

ಆಯ್ಕೆ:- ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ 'ಕರ್ಣಾಟಕ ರತ್ನ ಕಥಾಮಂಜರಿ ' ಎಂಬ ಮಹಾಕಾವ್ಯದಿಂದ ಆಯ್ದು 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ಕೃಷ್ಣನು ಪಾಂಡವ ಕೌರವರನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಕೃಷ್ಣನು ಕರ್ಣನು ಚಿಂತಿತನಾಗಿತ್ತಾನೆ ನಿನ್ನ ಮನದಲ್ಲಿ ತಲ್ಲಣ ಬೇಡ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ .

ಸ್ವಾರಸ್ಯ : ಕೃಷ್ಣನ ಹೇಳುವ ಮಾತಿನಲ್ಲಿ ಕೃಷ್ಣನ ಪ್ರಲೋಭನೆಯಲ್ಲಿ
ಕರ್ಣನಿಗೆ ಯಾವುದೇ ಕೆಡುಕನ್ನು ಬಯಸುವುದಿಲ್ಲ ಎಂಬುದು 3
ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

38. " ನೆಲಕಿಟಿವೆನೆಂದು ಬಗೆದಿರೆ ಚಲಕಿಚೆವೆಂ "

ಉ : ಆಯ್ಕೆ : ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ ' ಸಾಹಸ ಭೀಮ ವಿಜಯ ' ಎಂಬ ಕೃತಿಯಿಂದ ಆರಿಸಲಾಗಿರುವ ' ಛಲಮನೆ ಮೇಅವೆಂ ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ .

ಸಂದರ್ಭ : ಭೀಷ್ಮಾಚಾರ್ಯರು ಪಾಂಡವರನ್ನು ಒಪ್ಪಿಸುತ್ತೇನೆ .ಸಂಧಿಮಾಡಿಕೋ ' ಎಂದು ಹೇಳಿದಾಗ ದುರ್ಯೋಧನನು" ಅಜ್ಜಾ , ನಾನು ಈ ಭೂಮಿಗಾಗಿ ಯುದ್ಧ ಮಾಡುವೆನೆಂದು ಭಾವಿಸಿರುವಿರಾ ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು . ಈ ಭೂಮಿ ನನಗೆ ಪಾಳುಬಿದ್ದ ನೆಲಕ್ಕೆ ಸಮ " ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ .

ಸ್ವಾರಸ್ಯ : ದುರ್ಯೋಧನನ ಈ ಮಾತಿನಲ್ಲಿ ನಶ್ವರವಾದ ಅರಸುತನಕ್ಕಿಂತ ಛಲದಿಂದ ಬಾಳುವುದೇ ನಿಜವಾದ ಕ್ಷತ್ರಿಯನ ಗುಣ .
ಸಂಧಿಮಾಡಿಕೊಳ್ಳುವುದು ಹೇಡಿತನದ ಲಕ್ಷಣ ಎಂಬ ಧ್ವನಿ 3
ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ .

ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ :-

| | | |
|---|---|---|
| X. | (ಪ್ರತಿ ಸಾಲಿಗೆ ಒಂದು ಅಂಕ ) | 1X4=4 |
| 39. | ಹಸುರಾಗಸ ; ಹಸಿರು ಮುಗಿಲು; ಹೊಸ ಹೂವಿನ ಕಂಪು ಹಸುರು<br>ಹಸುರು ಗದ್ದೆಯ ಬಯಲು; <u>ಅಥವಾ</u> ಎಲರಿನ ತಂಪೂ ಹಸುರು!<br>ಹಸುರಿನ ಮಲೆ; ಹಸುರು ಕಣಿವೆ; ಹಕ್ಕಿಯ ಕೊರಲಿಂಪು ಹಸುರು!<br>ಹಸುರು ಸಂಜೆಯೀ ಬಿಸಿಲೂ! ಹಸುರು ಹಸಿರಿಳೆಯುಸಿರೂ! | |
| XI. | ಈ ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ<br>ಭಾವಾರ್ಥಕ್ಕೆ<br>ಮೌಲ್ಯ | 4<br>1X4=4<br>3<br>1 |
| 40. | ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ<br>ಹೊಸ ಭರವಸೆಗಳ ಕಟ್ಟೋಣ<br>ಮನುಜರ ನಡುವಣ ಅಡ್ಡಗೋಡೆಗಳ<br>ಕೆಡವುತ ಸೇತುವೆಯಾಗೋಣ.<br><br>ಭಾವಾರ್ಥ ಸಹಿತ ಸಾರಾಂಶ :ಇಂದಿನ ದಿನಮಾನದಲ್ಲಿ ಸಾಕಷ್ಟು ಮನುಷ್ಯರಲ್ಲಿ ಮೌಲ್ಯಗಳು ಕುಸಿದು ಹೋಗಿವೆ.ಮೌಲ್ಯಯುತ ಬದುಕು ಕಾಣದಾಗಿದೆ. ಆದ್ದರಿಂದಕುಸಿದು ಹೋಗಿರುವ ಮೌಲ್ಯಗಳನ್ನು ಮತ್ತೆ ಎಬ್ಬಿಸಿ ನಿಲ್ಲಿಸಬೇಕು, ಬಡತನ, ಅಜ್ಞಾಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು ಆಸರೆ ನೀಡಿ ಮೇಲೆ ತರಬೇಕು . ಅವರ ಮನಸ್ಸಿನಲ್ಲಿ ಪರಸ್ಪರ ಹೊಂದಾಣಿಕೆಯಿಂದ ಬದುಕುವ, ನಾವೆಲ್ಲರೂ ಒಂದೇ ಎಂಬ ಭಾವನೆಗಳು ಮೂಡುವಂತೆ ಹೊಸ ¨ಭರವಸೆಗಳನ್ನು ಕಟ್ಟಿ ಕೊಡಬೇಕು. ಹಾಗೆಯೇ ಪ್ರಸ್ತುತ ದಿನಗಳಲ್ಲಿ ಧರ್ಮಾಂಧತೆ, ಜಾತಿಯತೆಯಿಂದ ಸಹಬಾಳ್ವೆ ವಿಘಟನೆಯಾಗುತ್ತಿದೆ. ಮನುಜರ ನಡುವೆ ಇರುವ ಧರ್ಮ ,ಜಾತಿ,ಪಂಗಡ ಇತ್ಯಾದಿ¨ಬೇಧಭಾವಗಳನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲ ವರ್ಧಿಸುತ್ತದೆ. ಆದ್ದರಿಂದ ಮನುಷ್ಯರ ನಡುವೆ ಜಾತಿ, ಧರ್ಮ, ಭಾಷೆ,ವರ್ಣಗಳಿಂದ ಆವೃತವಾದ ಅಡ್ಡಗೋಡೆಗಳನ್ನು ಕೆಡವಿ ಹಾಕಬೇಕು .ಸಂಕುಚಿತ ಮನೋಭಾವನೆಯನ್ನು ಬಿಡಬೇಕು. ಬೇಧಭಾವನೆಗಳನ್ನು ಹೋಗಲಾಡಿಸಿ ವಿಶ್ವದ ಜನರೆಲ್ಲರನ್ನು ಒಂದಾಗಿಸುವ ಪ್ರೀತಿಯ, | |

| | | |
|---|---|---|
| | ಸ್ನೇಹದ ಸೇತುವೆಯನ್ನು ನಿರ್ಮಿಸೋಣವೆಂದು ವಿಶ್ವಕುಟುಂಬದ ಪರಿಕಲ್ಪನೆಯನ್ನುಸಮಾನತೆಯ ಮೌಲ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರುಹೇಳಿದ್ದಾರೆ. | |
| XII. | ಕೆಳಗಿನ ಪ್ರಶ್ನೆಗಳಿಗೆ 8-9 ವಾಕ್ಯದಲ್ಲಿ ಉತ್ತರಿಸಿ:- | 4 |
| 41. | ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?<br><br>ನಾಲ್ವಡಿ ಕೃಷ್ಣರಾಜ  ಒಡೆಯರು ೧೯೦೨ ರಲ್ಲಿ ಮೈಸೂರು ರಾಜ್ಯದ ನೇರ ಉಸ್ತುವಾರಿ ವಹಿಸಿಕೊಂಡರು. ಆಗ ದಿವಾನರಾಗಿದ್ದ ಸರ್. ಕೆ. ಶೇಷಾದ್ರಿಅಯ್ಯರ್‌ರವರು  ಸಹಕಾರದೊಡನೆ ಮೈಸೂರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ೧೯೨೩ರಲ್ಲಿ ಹೊಸಕಾನೂನೊಂದನ್ನು ಜಾರಿಗೆ ತಂದರು  ಪ್ರಜಾಪ್ರತಿನಿಧಿ ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು .<br><br>೧೯೦೭ ರಲ್ಲಿ ನ್ಯಾಯ ವಿಧಾಯಕ ಸಭೆಯನ್ನೂ ಸಹ ಸ್ಥಾಪಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನೂ ಸಹ ವಿಮರ್ಶಿಸುವ ಅಧಿಕಾರ ಆಸಕ್ತಿ ಇದ್ದಿತು. ೧. ಗ್ರಾಮ ನಿರ್ಮಲೀಕರಣ ೨. ವೈದ್ಯ ಸಹಾಯ ೩. ವಿದ್ಯಾ ಪ್ರಚಾರ ೪. ನೀರಿನ ಸೌಕರ್ಯ ೫. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳಲ್ಲಿ  ಸ್ವಯಂ ಆಡಳಿತ ಕ್ಷೇತ್ರಗಳದವು. ಸಾಹಿತ್ಯ , ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ನಾಡಿನಲ್ಲೇ ಮೊಟ್ಟಮೊದಲ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್,ಮೈಸೂರು ಬ್ಯಾಂಕಿನ ಸ್ಥಾಪನೆ ಮಾಡಲಾಯಿತು. ಉಚಿತ ಆಸ್ಪತ್ರೆಯ ಕಾರ್ಯಾರಂಭ ಮಾಡಿದರು  . ೧೯೦೬ರಲ್ಲಿ ಸಹಕಾರ ಸಂಘವನ್ನುಸ್ಥಾಪಿಸಲಾಯಿತು. ರೈಲು ಯೋಜನೆಯನ್ನು  ಜಾರಿಗೆ ತಂದರು.ಅಲ್ಲದೆ ಒಡೆಯರ ಕಾಲದಲ್ಲಿ ಶಿವನ ಸಮುದ್ರ  ಜಲವಿದ್ಯುತ್ ಯೋಜನೆ, ವಾಣಿ ವಿಲಾಸ ಸಾಗರ ಆಣೆಕಟ್ಟು ಮತ್ತು ಕನ್ನಾಂಬಾಡಿಯಲ್ಲಿ ಕೃಷ್ಣರಾಜಸಾಗರ ಆಣೆಕಟ್ಟು ನಿರ್ಮಾಣ ಮಾಡಿದ್ದರಿಂದ ವಿದ್ಯುತ್ ಮತ್ತು ನೀರಾವರಿ ಯೋಜನೆಯನ್ನು ಕಾರ್ಯರೂಪಕ್ಕೆ ಬಂದರು  . ಪ್ರಾಥಮಿಕ ಮತ್ತು ಮಾಧ್ಯವಿಮಿಕವಿದ್ಯಾಭ್ಯಾಸವನ್ನು  ಉಚಿತ ಮತ್ತು ಕಡ್ಡಾಯವಾಗಿ ಪ್ರಾರಂಭಾವಯಿತು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾವನ್ನಾಗಿ ರೂಪಿಸಿದರು.ಇವರ ಕಾಲದಲ್ಲಿ ಇಡೀ '' ಯಾವ ಸಂಸ್ಥಾದಲ್ಲಿ  ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ , ಮೈಸೂರು ಮಾದರಿ ಮೈಸೂರು ರಾಜ್ಯ' ಎಂಬ | 2X4=8 |

ಕೀರ್ತಿಗೆಗೆ ಪ್ರಾಪ್ತವಾಯಿತು.

ಅಥವಾ

2. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದರು. ದಿವಾನರಾದ ನಂತರ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ದಕ್ಷತೆ ಮತ್ತುಪ್ರಾಮಾಣಿಕತೆಗೆ ಒತ್ತು ನೀಡಿದರು. ನ್ಯಾಯಾಂಗ ಮತ್ತು ಕಾರ್ಯಾಂಗವನ್ನು ಅಧಿಕಾರವನ್ನು ಪ್ರತ್ಯಾಪ್ರತ್ಯೇಕಗೊಳಿಸುತ್ತದೆ . ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. ೧೯೧೩ ರಲ್ಲಿ ಪ್ರ ಾಥಮಿಕ ಶಿಕ್ಷಣ ನಿಬಂಧವನ್ನು ಜಾರಿಗೆ ತಂದರು. ಮೈಸೂರು ಸಂಸ್ಥಾನದ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು . ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರಕಾಲದಲ್ಲಾಯಿತು. ಬೆಂಗಳೂರಿನಲ್ಲಿ ಮೆಕಾನಿಕನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನೂ ಪ್ರಾರಂಭಿಸಿದರು .ಕನ್ನಡ ಸಾಹಿತ್ಯ ಪರಿಷತ್ತನ್ನು ' ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ . ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರಪ್ರಾಶ ನೀಡಿದ್ದರು. "ಕೈಗಾರಿಕೀಕ ರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು . ಇವರ ಕಾಲದಲ್ಲಿ " ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಸ್ಥಾಪಿತವಾಯಿತು. ಇದಲ್ಲದೆ ಹೆಂಚಿನ ಕಾರ್ಖಾನೆ, ಮೊಳೆ ಮತ್ತು ಗೊಬ್ಬರ ತಯಾರಿಕಾ ಸಕ್ಕರೆ ಕಾರ್ಖಾನೆ, ಔಷದಃತಯಾರಿಕಾ ಘಟಕ, ಗಂಧದ ಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳು ಸ್ಥಾಪಿತವಾದವು. ಸೋಪು ಹಾಗೂ ಲೋಹ ತಯಾರಿಕೆ, ಕಲೆಮತ್ತು ಕರಕುಶಲ ಡಿಪೋ, ಕೃಷ್ಣರಾಜೇಂದ್ರ ಬಟ್ಟೆ ಗಿರಣಿ,ಕಾಗದ ತಿರುಳು, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳು ತಯಾರಿಕಾಘಟಕಗಳು -ಹೀಗೆ ನೂರಾರು ಕೈಗಾರಿಕೆಗಳು ಪ್ರಾರಂಭಗೊಂಡವು . ೧೯೧೩ ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು.. ಕೈಗಾರಿಕೆ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿನಿಧಿಗಳನ್ನು ಸ್ಥಾಪಿಸಿದರು.. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು.

| | | |
|---|---|---|
| | ರಾಜ್ಯದಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿಹೊಸ ದೃಷ್ಟಿಕೋನವನ್ನು ಕಂಡುಕೊಂಡರು . | |
| 42. | ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?<br><br>ಕ್ರಿ.ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಕುಂಪಣಿ ಸರಕಾರ ನಿಶ್ಶಸ್ತ್ರೀಕರಣಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು.ಈ ಆದೇಶದ ಪ್ರಕಾರ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಗೆ ಬಂದು ಜೋರ ಮಾಡಿ ಬೇಡರ ಆಯುಧಗಳನ್ನು ಕಸಿದುಕೊಳ್ಳಲು ಹೋದರು . ಇದನ್ನು ವಿರೋಧಿಸಿ ರಾಮ, ಬಾಲ, ಹನುಮ, ಜಡಗ ಮೊದಲಾದ ಹಲಗಲಿ ಬೇಡರು ತಮ್ಮಲ್ಲಿರುವ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದು ಒಳಗಿನಿಂದ ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಗುಂಡು ಹೊಡೆರು .ಇದರಿಂದ ಬ್ರಿಟೀಷ್ ಸೈನಿಕರು ದಂಗು ಹಿಡಿದು ದೂರ ಸರಿದು ನಿಂತರು. ಆಗ ಇನ್ನು ಹೆಚ್ಚಿನ ದಂಡು ಬರಲಿ ಎಂದು ಸಾಹೇಬ (ಜೆ.ಬಿ.ಸೆಟೆನ್ಕರ್) ಪತ್ರ ಬರೆದು ತನ್ನ ಮೇಲಿನ ಅಧಿಕಾರಿಗೆ ಕಳಿಸಿದನು. ಆಗ ಬ್ರಿಟೀಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು . ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಸಿಡಿಲು ಸಿಡಿಯುವ ಹಾಗೆ ಸಿಟ್ಟಿಲೆ ¨ ಭರಪೂರವಾಗಿ ಗುಂಡನ್ನು ,ಸುರಿಸಿದರು. ಇದರಿಂದ ಹಲಗಲಿಬಂಟರು ಹೋರಾಡಿ ವೀರ ಮರಣವನ್ನಪಿದ . ಸಿಕ್ಕದ್ದನ್ನೆಲ್ಲ ತೆಗೆದುಕೊಂಡು ಊರಿಗೆ ಕೊಳ್ಳಿ ಇಟ್ಟು ಗುರುತು ಉಳಿಯದಂತೆ ಸುಟ್ಟು ಬೂದಿಮಾಡಿ ಹಲಗಲಿಯ ದಂಗೆಯನ್ನು ನಿಯಂತ್ರಿಸಿದರು.<br><br>ಅಥವಾ<br><br>೨. ಹಲಗಲಿ ದಂಗೆಯ ಪರಿಣಾಮವೇನು ?<br><br>ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟೀಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ | 4 |

| | | |
|---|---|---|
| | ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರತಿರವಿ ಹಾಕಿ ಕೊಂದರು . ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಕೆಲವು ಬೇಡರು ತಪ್ಪಿಸಿಕೊಂಡು ಗುಡ್ಡದ ಕಡೆ ಓಡಿದರು. ಅಗಸಿಗೆ ಬಂದು ಬುದ್ಧಿ ಮಾತನ್ನು ಹೇಳುತ್ತಿದ್ದ ಹೆಬಲಕ ಸಾಹೇಬನ್ನು ಜಡಗ ಗುಂಡು ಹೊಡೆದು ಕೊಂದು ಹಾಕಿದನು. ಇದರಿಂದ ಸಿಟ್ಟಿಗೆದ್ದ ಕಾರಸಾಹೇಬ ಊರನ್ನು ಲೂಟಿ ಮಾಡಲು ಆದೇಶಿಸಿದನು . ಬ್ರಿಟೀಷ್ ಸೈನಿಕರು ಸಿಡಿಲು ಸಿಡಿಯುವ ಹಾಗೆ ಸಿಟ್ಟಿಲೆ ¨ಭರಪೂರವಾಗಿ ಗುಂಡನ್ನು ಸುರಿಸಿದನು . ಬಾಲನು ಕಸರತ್ತಿನಿಂದ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದನು . ರಾಮನ ವಿಪರೀತ ಕಡಿತದಿಂದ ರಕ್ತದ ಕಾಲುವೆ ಹರಿಯಿತ . ಹೀಗೆ ಹಲಗಲಿ ಬಂಟರಾದ ಪೂಜೇರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ, ಭೀಮ ಮೊದಲಾದ ಹೋರಾಡಿ ವೀರ ಮರಣವನ್ನಪ್ಪಿದ . ಹಲಗಲಿಗೆ ಮುತ್ತಿಗೆ ಹಾಕಿ ಬೇಡರನ್ನು ಬಗ್ಗು ಬಡಿದ ಬ್ರಿಟೀಷ್ ದಂಡು ಕೊಡಲಿ, ಕುಡಗೋಲು, ಕುಡ, ಕಬ್ಬಿಣ, ಮೊಸರು ,ಬೆಣ್ಣೆ, ಹಾಲು, ಉಪ್ಪು ,ಎಣ್ಣೆ ,ಅರಿಸಿಣ, ಜೀರಗಿ , ಅಕ್ಕಿ ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳಸೂತ್ರ, ಬೀಸುವಕಲ್ಲು –ಹೀಗೆ ಸಿಕ್ಕಿದ್ದೆಲ್ಲಾ ತೆಗೆದುಕೊಂಡು, ಊರಿಗೆ ಕೊಳ್ಳಿ ಇಟ್ಟು ಸುಟ್ಟು ಬೂದಿ ಮಾಡಿ ಗುರುತು ಉಳಿಯದಂತೆ ಮಾಡಿ ಹೋಗಿದ್ದರಿಂದ ಹಾಳಾಗಿ ಹೋಯಿತು. | |
| XIII. | ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ | 4 |
| 43. | ಅ)ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳು. ಮೊದಲನೆಯದು ಪ್ರಕಾಶ ಯುದ್ಧ- ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ. ಎರಡನೆಯದು ಕೂಟಯುದ್ಧ - ತಂತ್ರಗಳ ಮೂಲಕ ಯುದ್ಧ ಮಾಡುವುದು. ಮೂರನೆಯದು ಮೌನ ಯುದ್ಧ - ಶತ್ರು ಅಧಿಕಾರಗಳನ್ನು ನಾಶಪಡಿಸಲು ಗುಪ್ತ ಕಾರ್ಯಾಚರಣೆ ನಡೆಸುವುದು. ಯಾವಾಗ ಶತ್ರುಗಳಿಗಿಂತ ಬಲಿಷ್ಠವಾಗಿದ್ದು ಪರಿಸ್ಥಿತಿ ಅನುಕೂಲಕರವಾಗಿರುತ್ತದೋ ಆಗ ಅವನು ಮುಕ್ತ ಯುದ್ಧವನ್ನೇ ಮಾಡಬೇಕು. ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯದಲ್ಲಿ ನಡೆಯುವ ಮುಕ್ತ ಯುದ್ಧವೇ ಧರ್ಮಯುದ್ಧ. | 2+2=4 |
| | ಆ)ಭಾರತದ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ ಮನೋನಿಶ್ಚಯದಂತೆ ಅಪೂರ್ವ ಕುಶಲತೆಯನ್ನು ತೋರಿದ ಪ್ರತಿಭಾವಂತನೀತ. ಸರಳ | 2 |

| | | |
|---|---|---|
| | ತಂತ್ರಗಳಿಂದ ಚಂದ್ರಗುಪ್ತನಶತ್ರುಬಲವನ್ನು ನಿರಾಲಂಬನಗೊಳಿಸಿ ಮೌರ್ಯವಂಶದ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ತನ್ನನ್ನೇ ಹಿಂಬಾಲಿಸಿಬಂದ ರಾಜಲಕ್ಷ್ಮಿ, ಅಧಿಕಾರಗಳನ್ನು ದೂರೀಕರಿಸಿ ವಿರಕ್ತನಂತೆ ಆಶ್ರಮವಾಸಿಯಾಗುತ್ತಾನೆ. | |
| XIV.<br>44 | ಕೆಳಗಿನ ಯಾವುದಾದರೂ ಒಂದಕ್ಕೆ ಮಾಹಿತಿಗಳು ಅನುಸಾರವಾಗಿ ಪತ್ರ ಬರೆಯಿರಿ<br>ಇಂದ, ಗೆ,<br>ಮಾನ್ಯರೇ,ವಿಷಯ<br>ಪತ್ರದ ಒಡಲು<br>ವಾಕ್ಯಬದ್ಧ ಬರವಣಿಗೆ | 2<br>1X5=5<br>1<br>1<br>2 |
| XV<br>45 | ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :-<br>ಪೀಠಿಕೆ<br>ವಿಷಯ ವಸ್ತು<br>ಉಪಸಂಹಾರ<br>ಶುದ್ಧ ಬರಹ | 1<br>1X5=5<br>1<br>2<br>1<br>1 |

## ರಾಷ್ಟ್ರೀಯ ಭಾವೈಕ್ಯತೆ

### ಪೀಠಿಕೆ

ಒಂದು ರಾಷ್ಟ್ರದ ಭೌಗೋಳಿಕ ಪರಿಸರದಲ್ಲಿ ಜನರು ವಾಸಿಸುವ ಪ್ರದೇಶವನ್ನು ರಾಷ್ಟ್ರ ಎನ್ನುತ್ತೇವೆ ಹಾಗೂ ವಿವಿಧತೆಯಲ್ಲಿ ಏಕತೆಯಿಂದ ಇರುವುದನ್ನು ಭಾವೈಕ್ಯತೆ ಎನ್ನುತ್ತೇವೆ. ರಾಷ್ಟ್ರೀಯ ಭಾವೈಕ್ಯತೆ ಎಂದರೆ ಒಂದು ದೇಶದಲ್ಲಿ ವಾಸಿಸುವ ಎಲ್ಲ ಜನರೂ ಸಹ ತಾವೆಲ್ಲಾ ಒಂದೇ ರಾಷ್ಟ್ರದ ನ ಎಂಬ ಭಾವನೆಯಿಂದ ಸಾಮರಸ್ಯ ಏಕತೆ , ಒಗ್ಗಟ್ಟುಗಳಿಂದ ಸಹಬಾಳ್ವೆ ಮಾಡುವ ಗುಣಧರ್ಮವೇ ರಾಷ್ಟ್ರೀಯ ಭಾವೈಕತೆ

### ವಿಷಯ ಬೆಳವಣಿಗೆ

ಭಾರತ ಹಲವು ಮತ ಧರ್ಮಗಳನ್ನು ಹೊಂದಿರುವ ದೇಶ , ಹಲವು ಜನಾಂಗದ ಜನರು ಪ್ರಾಚೀನ ಕಾಲದಿಂದ ಇಲ್ಲಿ ನೆಲೆಸಿದ್ದಾರೆ . ವೇಷ , ಭೂಷಣ , ಭಾಷೆ ಬೇರೆ ಬೇರೆಯಾದರೂ ಎಲ್ಲರೂ ಭಾರತೀಯರು .ಭಾರತವು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಮತ್ತು ಗುಜರಾತ್‌ನಿಂದ ಪಶ್ಚಿಮಬಂಗಾಳದವರೆಗೂ ಇಪ್ಪತ್ತೊಂಬತ್ತು ರಾಜ್ಯಗಳನ್ನು ಮತ್ತು ಏಳು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡು ವಿಶಾಲವಾಗಿ ಹಬ್ಬಿದೆ .

ನಮ್ಮ ರಾಷ್ಟ್ರದಲ್ಲಿ ಹಿಂದು , ಬೌದ್ಧ , ಜೈನ , ಮುಸ್ಲಿಂ , ಕ್ರೈಸ್ತ ಹೀಗೆ ಹಲವಾರು ಧರ್ಮದವರು ಸಾಕಷ್ಟು ಜನಸಂಖ್ಯೆ ಇದ್ದರೂ , ಎಲ್ಲರೂ ಭಾರತೀಯರು ಎಂಬ ಒಂದೇ ಭಾವನೆಯಿಂದ ಸಹಬಾಳ್ವೆ ನಡೆಸುತ್ತಿದ್ದಾರೆ . ಇಲ್ಲಿ ಭಾಷೆ , ಆಚಾರ , ವಿಚಾರ , ಉಡುಗೆ , ಹಬ್ಬಗಳಲ್ಲಿ ಭಿನ್ನತೆ ಇದ್ದರೂ ರಾಷ್ಟ್ರದ ಏಕತೆಗೆ ಅಡ್ಡಿಯಾಗಿಲ್ಲ .ಭಾರತ ಮಾತೆಯ ಮಕ್ಕಳು ಎಂಬ ಭಾವನೆ ಇದೆ. ಭಾರತ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಹೊಂದಿದೆ . ಇಲ್ಲಿ ಯಾರೂ ಮೇಲಲ್ಲ ಯಾರೂ ಕೀಳಲ್ಲ .ಭಾರತದಂತಹ ಬಹುಭಾಷಿಕ , ಬಹು ಸಂಸ್ಕೃತಿಯ ವಿವಿಧ ಜಾತಿ – ಮತ – ಧರ್ಮಗಳಿರುವ ದೇಶದಲ್ಲಿ ಈ ಭಾವನೆ ಅತ್ಯವಶ್ಯಕವಾಗಿದೆ . ವಸುದೈವ ಕುಟುಂಬಕಂ ಎಂಬುವುದು ನಮ್ಮ ಸಂಸ್ಕೃತಿಯ ಮೂಲ ಮಂತ್ರವಾಗಿದೆ .ಪರಕೀಯರ ಆಡಳಿತ ನಮ್ಮ ದೇಶದಲ್ಲಿ ಬಂದಾಗ ಜಾತಿ ಇತ್ಯಾದಿ ವಿಷಯಗಳಲ್ಲಿ ನಮ್ಮನ್ನು ಒಡೆದು ಆಳುವ ತಂತ್ರವನ್ನು ಅನುಸರಿಸುತ್ತಿದ್ದರು . ಇದರಿಂದ ನಮ್ಮಲ್ಲಿ ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯಗಳು ಬಂದವು.

ಸ್ವತಂತ್ರ ಭಾರತದಲ್ಲಿಯೂ ಇಂತಹ ಭಾವನೆಗಳು ಮುಂದುವರಿಯುತ್ತಿರುವುದು ನಮ್ಮ ದೇಶದ ಅಭಿವೃದ್ಧಿಗೆ ಮಾರಕವಾಗಿ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ .ಇದು ಭಾರತದ ದೌರ್ಭಾಗ್ಯವೇ ಆಗಿದೆ . ರಾಷ್ಟ್ರೀಯ ಭಿನ್ನತೆಯಿಂದ ದೇಶವು ದುರ್ಬಲವಾಗಿರುತ್ತದೆ . ವಿವಿಧ ಸಮಸ್ಯೆಗಳು ರಾಜಕೀಯ ಮುಖಂಡರು , ಧಾರ್ಮಿಕತೆಯು ತಲೆಯೆತ್ತುತ್ತದೆ .ರಾಜಕೀಯದಿಂದ ಒಂದುಗೂಡಿ ಬಾಳುವ ಜನತೆಯಲ್ಲಿ ಭೇದ , ದ್ವೇಷವನ್ನು , ಒಡಕನ್ನು ಉಂಟು ಮಾಡುವ ಪ್ರಸಂಗಗಳು ನಡೆಯುತ್ತಿವೆ , ಇವು ಶಾಶ್ವತವಲ್ಲ .ಓಟಿಗಾಗಿ ರಾಜಕಾರಣಿಗಳು , ಸಮಾಜದಲ್ಲಿ ಒಡಕು ಉಂಟುಮಾಡುವ ಕಾರ್ಯಕ್ಕೆ ಜನರನ್ನು ಪ್ರೇರೇಪಿಸುವರು . ಅಧಿಕಾರಕ್ಕಾಗಿ ಸಮಾಜದ ಆರೋಗ್ಯವನ್ನು ಹಾಳು ಮಾಡುವರು , ಆದರೆ ಸಾಮಾನ್ಯ ಜನತೆ ಇದಕ್ಕೆ ಬೆಲೆ ಕೊಡದೆ ಎಲ್ಲರೂ ಒಂದು ಎಂಬ ಭಾವನೆಯಿಂದ ಬಾಳಿದರೆ , ಒಗ್ಗಟ್ಟಿನಿಂದ ಕಾರ್ಯ ಮಾಡಿದರೆ , ಜೀವನವೂ ಸುಖಮಯವಾಗುತ್ತದೆ ಹಾಗೂ ನಾಡು , ದೇಶ ಪ್ರಗತಿ ಹೊಂದುತ್ತದೆ .ಆದುದರಿಂದ ನಾಯಕರು , ಸರ್ಕಾರ ಹಾಗೂ ಪ್ರತಿಯೊಬ್ಬ ನಾಗರೀಕರೂ ಸಹ ಸ್ವಾರ್ಥ ಭಾವನೆಗಳನ್ನು ದೂರಮಾಡಿ ನಾವೆಲ್ಲ ಒಂದು ಎಂಬ ಒಗ್ಗಟ್ಟಿನ ಭಾವನೆಯನ್ನು ಬೆಳೆಸಿಕೊಳ್ಳಬೇಕು .ಈ ದೇಶದ ಅಖಂಡತೆ , ಹಾಗೂ ಭವ್ಯ ಸಂಸ್ಕೃತಿ ಪರಂಪರೆಗಳನ್ನು ಎತ್ತಿಹಿಡಿಯಬೇಕು . ದೇಶಭಕ್ತಿ , ತ್ಯಾಗ ಮನೋಭಾವನೆಯು ಜಾಗೃತವಾದಾಗ ಏಕತೆ ಗಟ್ಟಿಗೊಳ್ಳುತ್ತದೆ . ಭಾರತ ಸಂವಿಧಾನದಲ್ಲಿ ಮತೀಯ ಭೇದ ಭಾವಕ್ಕೆ ಅವಕಾಶವಿಲ್ಲ .ಬಡವ , ಶ್ರೀಮಂತ , ಎಲ್ಲರೂ ಸಮಾನರಾಗಿ ಬಾಳಬೇಕು. ಎಲ್ಲ ಜಾತಿಯ ಜನರು ಸಮಾನತೆಯನ್ನು ಕಾಪಾಡಿಕೊಳ್ಳಬೇಕು . ಪ್ರಗತಿಪರ ಬೆಳವಣಿಗೆಗೆ ಭಾವೈಕ್ಯತೆ ಅಗತ್ಯವಾಗಿದೆ.

### ಪ್ರಾಮುಖ್ಯತೆ :

ಒಂದು ರಾಷ್ಟ್ರದ ಜನತೆಯಲ್ಲಿ ಒಗ್ಗಟ್ಟು ಉಂಟುಮಾಡಲು ಭಾವೈಕ್ಯತೆ ಅಗತ್ಯವಾಗಿದೆ . ರಾಷ್ಟ್ರದ ಹಿತಾಸಕ್ತಿಯನ್ನು ಸಾಧಿಸಲು , ಅಭಿವೃದ್ಧಿ ಹೊಂದಲು ರಾಷ್ಟ್ರದ ಜನರು ತಾವೆಲ್ಲರೂ ಒಂದೆಂಬ ಭಾವನೆ ಬೆಳೆಸಲು ಭಾವೈಕ್ಯತೆ ಅಗತ್ಯವಾಗಿದೆ .ಭಾವೈಕ್ಯತೆಯು ದೇಶದ ಸಮಗ್ರತೆ , ಸೋದರತೆ ಮತ್ತು ಸಮಾನತೆಗೆ ಪ್ರಮುಖ ಪ್ರೇರಣೆಯಾಗುತ್ತದೆ

### ರಾಷ್ಟ್ರೀಯ ಭಾವೈಕ್ಯತೆಯ ಮೇಲೆ ಪ್ರಭಾವ ಬೀರುವ ಅಂಶಗಳು

1. ಸಾಂಸ್ಕೃತಿಕ ಅಂಶಗಳು :ರಾಷ್ಟ್ರದ ವಿವಿಧ ಸಮುದಾಯಗಳಿಗೆ ತನ್ನದೇ ಆದ ಅಭಿವ್ಯಕ್ತಿ ಸ್ವರೂಪಗಳಿರುತ್ತವೆ . ಭಾಷೆ ,

ಉಡುಗೆ – ತೊಡುಗೆ , ಕಲೆ , ಸಾಹಿತ್ಯ , ವಾಸ್ತುಶಿಲ್ಪ , ಊಟ – ಉಪಚಾರ , ರೀತಿ ನೀತಿಗಳು , ಧರ್ಮ , ಸಂಪ್ರದಾಯ , ನಡೆ – ನುಡಿ , ನಂಬುಗೆಗಳು ಮುಂತಾದವುಗಳೆಲ್ಲವೂ ಸಮುದಾಯದಿಂದ ಸಮುದಾಯಕ್ಕೆ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತವೆ .ಪ್ರತಿಯೊಂದು ಸಮುದಾಯದಲ್ಲಿಯೂ ನಂಬುಗೆಯುಳ್ಳವರು ಮತ್ತು ಆಚಾರವಿಚಾರವುಳ್ಳವರಿರುತ್ತಾರೆ .ಒಂದೇ ರಾಷ್ಟ್ರದಲ್ಲಿರುವ ಸಮುದಾಯದವರು , ಸಮಾಜದವರು , ಪ್ರದೇಶದವರು ತಮ್ಮ ತಮ್ಮ ಸಂಸ್ಕೃತಿ , ಧರ್ಮ , ಭಾಷೆ , ರೀತಿ ನೀತಿಗಳೇ ಶ್ರೇಷ್ಠವೆಂಬ ಸಂಕುಚಿತ ಭಾವನೆ , ಪ್ರತಿಷ್ಠೆ , ಅಹಂಕಾರಗಳೆಲ್ಲವೂ ಸಾಮಾಜಿಕ ಭಾವೈಕ್ಯತೆಯಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತವೆ.ಅನ್ಯ ಸಂಸ್ಕೃತಿಗಳಲ್ಲಿಯ ಗುರುತಿಸುವ ಮತ್ತು ವಿವಿಧ ಸಂಸ್ಕೃತಿಗಳಲ್ಲಿಯ ಸಾಮ್ಯತೆಯನ್ನು ಬೆಳೆಸುವುದು ಮತ್ತು ಸಕಾರಾತ್ಮಕ ಬೇರೆ ವಿಭಿನ್ನವಾದ ಬೇರೆ ಗುರುತಿಸುವ ಮತ್ತು ರಾಷ್ಟ್ರೀಯ ಉತ್ತಮಗುಣಗಳನ್ನು ಹೃದಯ ವೈಶಾಲ್ಯತೆಯನ್ನು ಬೆಳೆಸುವುದು ಶಿಕ್ಷಣದಮೂಲಕ ಮನೋವೃತ್ತಿಯನ್ನು ರಾಷ್ಟ್ರದ ತ ಆಗಬೇಕು .

2. ಮಾನಸಿಕ ವಿಕಾಸ ಅಂಶಗಳು :

ಪ್ರತಿಯೊಂದು ರಾಜ್ಯದಲ್ಲಿ , ಸಮುದಾಯದಲ್ಲಿ , ಸಂಘ – ಸಂಸ್ಥೆಗಳಲ್ಲಿ , ಪ್ರತಿ ಗುಂಪಿನಲ್ಲಿ ಪ್ರತಿಯೊಬ್ಬನೂ ಅವನಿಗೆ ದೊರಕುವ ಅವಕಾಶಗಳನ್ನವಲಂಬಿಸಿ ಮಾನಸಿಕವಾಗಿ ಭಿನ್ನವಾಗಿರುತ್ತಾನೆ . ಅವನ ಜಾಣ್ಮೆಯ ಮಟ್ಟ , ವಿಷಯ ಗ್ರಹಿಸಿ ಅರ್ಥಮಾಡಿಕೊಳ್ಳುವ ರೀತಿ , ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ರೀತಿ ಭಿನ್ನವಾಗಿರುತ್ತವೆ .ಇಂಥ ವ್ಯತ್ಯಾಸವನ್ನು ಪಟ್ಟಣ ನಿವಾಸಿಗಳಲ್ಲಿ ಮತ್ತು ಗ್ರಾಮ ನಿವಾಸಿಗಳಲ್ಲಿ ಕಾಣಬಹುದು . ಇದೂಕೂಡ ರಾಷ್ಟ್ರದ ಪ್ರಜೆಗಳಲ್ಲಿ ಸಾಮರಸ್ಯ ತರಲಾರದು . ಆದ್ದರಿಂದ , ರಾಷ್ಟ್ರದ ಎಲ್ಲ ಪ್ರಜೆಗಳಿಗೆ ಸಮಾನಾವಕಾಶ ಮಾಡಿಕೊಡುವುದು ಎಲ್ಲರ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುತ್ತದೆ .

3. ದೈಹಿಕ ಸ್ವರೂಪದ ಅಂಶಗಳು :

ಎಲ್ಲ ಮಾನವರ ಸಮಗ್ರ ಸ್ವರೂಪವು ಒಂದೇ ಆಗಿರುತ್ತದೆಯಾದರೂ ವಿವಿಧ ಕುಲದ ಮಾನವರು ಭಿನ್ನ ಭೌಗೋಳಿಕ ಪ್ರದೇಶಗಳಲ್ಲಿ ವಿಕಾಸ ಹೊಂದಿರುವುದರಿಂದ ಮೇಲ್ನೋಟಕ್ಕೆ ಭಿನ್ನವಾಗಿ ಕಾಣುತ್ತಾರೆ . ಅವರ ದೈಹಿಕ ಆಕಾರ ಸ್ವರೂಪಗಳು ಭಿನ್ನವಾಗಿರುತ್ತವೆ . ಈ ಲಕ್ಷಣಗಳನ್ನು ಆಯಾ ಸಮುದಾಯದ ಸದಸ್ಯರು ಅನುವಂಶೀಯವಾಗಿ ಪಡೆದುಕೊಂಡು ಜನ್ಮತಾಳಿರುತ್ತಾರೆ .ಇಂಥ ದೈಹಿಕ ಸ್ವರೂಪದಲ್ಲಿಯ ಭಿನ್ನತೆಯೂಕೂಡ ರಾಷ್ಟ್ರೀಯ ಭಾವೈಕ್ಯತೆಗೆ ಅಡ್ಡಿಯುಂಟು ಮಾಡುತ್ತದೆ . ಆದರೆ , ಎಲ್ಲ ಮಾನವರಲ್ಲಿ ನಡೆಯುವ ದೈಹಿಕ ಪ್ರಕ್ರಿಯೆಗಳು ಒಂದೇ ಆಗಿರುತ್ತವೆ .ಎಲ್ಲರ ಜೀವನಕ್ಕಾಗಿ ಬೇಕಾಗುವ ಆಮ್ಲಜನಕ , ಆಹಾರ , ನೀರು ಒಂದೇ , ಎಲ್ಲರ ಮೂಲ ಪ್ರವೃತ್ತಿಗಳೂ ಒಂದೇ . ಯಾವಕುಲದಲ್ಲಿಯೂ ಮೇಲು ಕೀಳು ಎನ್ನುವುದಿಲ್ಲವೆಂಬ ಭಾವನೆ ಎಲ್ಲರಲ್ಲಿಯೂ ಬಂದಾಗ ಮಾತ್ರ ರಾಷ್ಟ್ರೀಯ ಭಾವೈಕ್ಯತೆ ಸುಲಭವಾಗುತ್ತದೆ .

4. ಆರ್ಥಿಕ ಅಂಶಗಳು :

ವ್ಯಕ್ತಿ ವ್ಯಕ್ತಿಗಳ ನಡುವಿನ , ಸಮುದಾಯ ಸಮುದಾಯಗಳ ನಡುವಿನ ಆರ್ಥಿಕ ಭಿನ್ನತೆಯು ಅವರ ಬೌದ್ಧಿಕ ವಿಕಾಸ ಮತ್ತು ಅವರು ಪಡೆದ ಜೀವನ ಕೌಶಲ್ಯ , ಮುಂತಾದವುಗಳನ್ನು ಅವಲಂಬಿಸಿರುತ್ತದೆ .ವ್ಯಕ್ತಿಗಳ ಅಥವಾ ಸಮುದಾಯಗಳಲ್ಲಿಯ ಆರ್ಥಿಕ ಅಸಮಾನತೆಯು ರಾಷ್ಟ್ರೀಯ ಭಾವೈಕ್ಯತೆಗೆ ತೊಡಕನ್ನು ಉಂಟುಮಾಡುತ್ತದೆ ಮತ್ತು ಅವರ ಮುಂಬರುವ ಸಂತತಿಗಳ ಶಿಕ್ಷಣ , ಮಾನಸಿಕ ವಿಕಾಸ ಮತ್ತು ಅವರಿಗೆ ಸಿಕ್ಕಬಹುದಾದ ಅವಕಾಶಗಳ ಮೇಲೆ ಪ್ರಭಾವಬೀರುತ್ತದೆ .ಆದ್ದರಿಂದ ಬಡವರು ಶ್ರೀಮಂತರ ನಡುವಿನ ಆರ್ಥಿಕ ಅಂತರವನ್ನು ಕಡಿಮೆಗೊಳಿಸುವುದು ಸಮಾಜದ ಹೊಣೆಗಾರಿಕೆಯಾಗಿದೆ .

5. ಭೌಗೋಳಿಕ ಅಂಶಗಳು :

ಮಾನವರು ರಾಷ್ಟ್ರದಾದ್ಯಂತ ಮತ್ತು ಜಗತ್ತಿನಾದ್ಯಂತ ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ವಾಸಿಸುತ್ತಾರೆ ತಾವು ವಾಸಿಸುವ ಪ್ರದೇಶವು ತಮ್ಮ ವೈಯಕ್ತಿಕ ಸೊತ್ತು ಅಲ್ಲಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳೆಲ್ಲವೂ ತಮಗಾಗಿ ಮಾತ್ರವೆಂದು ಭಾವಿಸುತ್ತಾರೆ . ಅವರು ಪರಕೀಯರಿಂದ ಅತಿಕ್ರಮಣವನ್ನು ವಿರೋಧಿಸುತ್ತಾರೆ .ಒಂದು ರಾಷ್ಟ್ರದಲ್ಲಿ ಭೌಗೋಳಿಕವಾಗಿ ಬೇರೆ ಬೇರೆ ರಾಜ್ಯಗಳನ್ನಾಗಿ ವಿಂಗಡಿಸಲಾಗಿರುತ್ತದೆ . ಪರಸ್ಪರ ಅತಿಕ್ರಮಣ ಮಾಡುವುದಿಲ್ಲ . ರಾಜ್ಯಗಳ ಗಡಿಗಳು ಸಂಪನ್ಮೂಲಗಳು ಸಾರ್ವಜನಿಕ ಸೊತ್ತು .ಅದರ ಮೇಲೆ ದುರುಪಯೋಗದಿಂದ ಉಳಿದವರು ತಮ್ಮ ಅಧಿಕಾರದಿಂದ ಆಡಳಿತದ ಅನುಕೂಲಕ್ಕಾಗಿ ಒಂದೇ ರಾಷ್ಟ್ರದ ವಿವಿಧ ರಾಜ್ಯದವರು ವಲ ಕಾಲ್ಪನಿಕ , ರಾಷ್ಟ್ರದ ನೈಸರ್ಗಿಕ ಲ್ಲರಿಗೂ ಸಮಾನವಾದ ಹಕ್ಕು ಇದೆ . ಅದರ ವಂಚಿತರಾಗುತ್ತಾರೆ .ನಮ್ಮ ನಾಗರಿಕರ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ . ಇಂಥ ಮನೋಭಾವನೆಯಿಂದ ಮಾತ್ರ ರಾಷ್ಟ್ರೀಯ ಭಾವೈಕ್ಯತೆ ಸಾಧ್ಯವಾಗುವುದು .

ಉಪ ಸಂಹಾರ

ಒಂದು ರಾಷ್ಟ್ರವು ಮುಂದುವರಿಯಬೇಕಾದರೆ ಬೇರೆ ಬೇರೆ ರಾಜ್ಯಗಳಿಗೂ ಕೇಂದ್ರಾಡಳಿತಕ್ಕೂ ಸಂಪೂರ್ಣ ಸಂಬಂಧವಿರಬೇಕು ಹಾಗೂ ಹೊಂದಾಣಿಕೆಯಿರಬೇಕು .ಎಲ್ಲ ರಾಜ್ಯದ ಜನರಲ್ಲಿ ರಾಷ್ಟ್ರಪ್ರಜ್ಞೆ ಮತ್ತು ರಾಷ್ಟ್ರಾಭಿಮಾನ ಇರಬೇಕು.ಪ್ರಜೆಗಳು ರಾಷ್ಟ್ರದ ಕಷ್ಟಪಟ್ಟು ಕೆಲಸ ಮಾಡುವವರೂ ಅಭಿಮಾನಿಗಳೂ , ಸಾಹಸಿಗರೂ ,ಆಗಿರಬೇಕು .ಇದು ನಮ್ಮ ದೇಶ , ಇದು ನಮ್ಮ ರಾಷ್ಟ್ರ ನಾವು ಈ ದೇಶದ ಮಕ್ಕಳು , ಇದರ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ನಾವು ಎಂತಹ ತ್ಯಾಗಕ್ಕೂ ಸಿದ್ಧರಾಗಿದ್ದೇವೆ 'ಎಂದು ನಂಬಿದವರೇ ರಾಷ್ಟ್ರಪ್ರೇಮಿಗಳು , ಇಂತಹ ಭಾವನೆಗಳಲ್ಲಿ ಎಲ್ಲ ಪ್ರಜೆಗಳಲ್ಲೂ ಏಕತೆ ಇರುವುದೇ ರಾಷ್ಟ್ರೀಯ ಭಾವೈಕ್ಯತೆ.

ಮಹಿಳಾ ಸಬಲೀಕರಣ

ಪೀಠಿಕೆ

ಮಹಿಳಾ ಸಬಲೀಕರಣ' ಎಂಬ ಪದವು ಮಹಿಳೆಯರು ಸಾಕಷ್ಟು ಶಕ್ತಿಶಾಲಿಗಳಲ್ಲ – ಅವರು ಸಬಲೀಕರಣಗೊಳ್ಳಬೇಕು ಎಂಬುದನ್ನು ಸೂಚಿಸುತ್ತದೆ. ಈ ನೋವಿನ ಸತ್ಯ ಬಹಳ ಹಿಂದಿನಿಂದಲೂ ಇದೆ.ನಮ್ಮ ಸಮಾಜವು ಪುರುಷರು ಮತ್ತು ಮಹಿಳೆಯರನ್ನು ಒಳಗೊಂಡಿದೆ. ಹಿಂದಿನ ಕಾಲದಲ್ಲಿ, ಪುರುಷರನ್ನು ಕುಟುಂಬದ ಪ್ರಮುಖ ಸದಸ್ಯರೆಂದು ಪರಿಗಣಿಸಲಾಗಿತ್ತು. ಅವರು ಜೀವನೋಪಾಯವನ್ನು ಗಳಿಸುವ ಜವಾಬ್ದಾರಿಯನ್ನು ಹೊಂದಿದ್ದರು ಮತ್ತು ಕುಟುಂಬದ ನಿರ್ಧಾರ ತೆಗೆದುಕೊಳ್ಳುವವರಾಗಿದ್ದರು.ಮತ್ತೊಂದೆಡೆ, ಮಹಿಳೆಯರು ಮನೆಕೆಲಸ ಮತ್ತು ಮಕ್ಕಳನ್ನು ಬೆಳೆಸುವ ಜವಾಬ್ದಾರಿಯನ್ನು ಹೊಂದಿದ್ದರು. ಆದ್ದರಿಂದ, ಪಾತ್ರಗಳು ಮುಖ್ಯವಾಗಿ ಲಿಂಗವನ್ನು ಆಧರಿಸಿವೆ. ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇರಲಿಲ್ಲ. ನಾವು ನಮ್ಮ ಸಂಪೂರ್ಣ ವಲಯವನ್ನು ನಿರ್ಣಯಿಸಿದರೆ, ಮಹಿಳೆಯ ಸಮಸ್ಯೆಗಳು ಅವಳ ಸಂತಾನೋತ್ಪತ್ತಿ ಪಾತ್ರ ಮತ್ತು ಅವಳ ದೇಹದ ಮೇಲೆ ಅಥವಾ ಕೆಲಸಗಾರ್ತಿಯಾಗಿ ಅವರ ಆರ್ಥಿಕ ಪಾತ್ರದ ಮೇಲೆ ಕೇಂದ್ರೀಕೃತವಾಗಿವೆ ಎಂದು ಸಂಶೋಧನೆ ಹೇಳುತ್ತದೆ. ಆದರೆ ಇವರ್ಯಾರೂ ಮಹಿಳೆಯರ ಸಬಲೀಕರಣದತ್ತ ಗಮನಹರಿಸಿಲ್ಲ.ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರನ್ನು ಅತ್ಯಲ್ಪ ಮತ್ತು ಶಕ್ತಿಹೀನತೆಯ ಪ್ರಪಾತದಿಂದ ಮೇಲೆತ್ತುವ ಗಮನಾರ್ಹ ಕೆಲಸ ಪ್ರಾರಂಭವಾಯಿತು.ಪಿತೃಪ್ರಧಾನ ಸಮಾಜವು ಪ್ರಪಂಚದಾದ್ಯಂತ ಮಹಿಳಾ ಸ್ವಾತಂತ್ರ್ಯವನ್ನು ಹತ್ತಿಕ್ಕಿತು. ಮಹಿಳೆಯರಿಗೆ ಮತದಾನ ಮಾಡಲು ಅಥವಾ ಯಾವುದೇ ಅಭಿಪ್ರಾಯವನ್ನು ಮಂಡಿಸಲು ಅವಕಾಶವಿರಲಿಲ್ಲ.ಮಹಿಳೆಯರು ತಮ್ಮ ಮನೆಗಳಿಗೆ ಸೀಮಿತರಾಗಿದ್ದರು. ಸಮಯ ಮುಂದುವರೆದಂತೆ, ತಮ್ಮ ಜೀವನವು ಕೇವಲ ಮನೆಯಲ್ಲಿ ಸೇವೆ ಸಲ್ಲಿಸುವುದಕ್ಕಿಂತ ಹೆಚ್ಚಿನದನ್ನು ಅರ್ಥೈಸುತ್ತದೆ ಎಂದು ಅವರು ಅರಿತುಕೊಂಡರು. ಹೆಚ್ಚು ಹೆಚ್ಚು ಮಹಿಳೆಯರು ಮಾನವ ನಿರ್ಮಿತ ಅಡೆತಡೆಗಳನ್ನು ದಾಟಲು ಪ್ರಾರಂಭಿಸಿದಾಗ, ಪ್ರಪಂಚವು ಮಹಿಳೆಯರ ಬೆಳವಣಿಗೆಗೆ ಸಾಕ್ಷಿಯಾಗಲು ಪ್ರಾರಂಭಿಸಿತು.

ವಿಷಯ ಬೆಳವಣಿಗೆ

ಪುರುಷರಿಗಿಂತ ಭಿನ್ನವಾಗಿ, ಮಹಿಳೆಯರು ತಮ್ಮ ವಿರುದ್ಧ ಲಿಂಗದ ಧ್ವನಿಯನ್ನು ಹತ್ತಿಕ್ಕಲು ಎಂದಿಗೂ ಪ್ರಯತ್ನಿಸುವುದಿಲ್ಲ. ಅವರು ಎಲ್ಲಾ ದೀನದಲಿತ ಜನರ ಕೈಗಳನ್ನು ಹಿಡಿದಿದ್ದಾರೆ – ಪುರುಷರು ಮತ್ತು ಮಹಿಳೆಯರು – ಮತ್ತು ಅವರು ತಮ್ಮ ಜೀವನವನ್ನು ಸುಧಾರಿಸಲು ಪ್ರಯತ್ನಿಸುತ್ತಿರುವಾಗ ಅವರನ್ನು ದುರದೃಷ್ಟದಿಂದ ಹೊರತೆಗೆಯುತ್ತಾರೆ.

ಮಹಿಳಾ ಸಬಲೀಕರಣದ ಇತಿಹಾಸ

ಮಹಿಳಾ ಸಬಲೀಕರಣದ ಇತಿಹಾಸವು ನಿಖರವಾದ ದಿನಾಂಕದಿಂದ ಪ್ರಾರಂಭವಾಗುವುದಿಲ್ಲ, ಇದು ಸಂಚಿತ ಪ್ರಕ್ರಿಯೆಯಾಗಿದೆ. ಆದಾಗ್ಯೂ, ಕೆಲವು ಚಳುವಳಿಗಳು, ಪ್ರತಿಭಟನೆಗಳು, ಕ್ರಾಂತಿಗಳು ಮಹಿಳಾ ಸಬಲೀಕರಣದ ಕಾರಣವನ್ನು ಹೆಚ್ಚು ವೇಗವಾಗಿ ಹೆಚ್ಚಿಸಿವೆ.ಪ್ರಾಚೀನ ದಿನಗಳಲ್ಲಿ ಮತ್ತು ಇತ್ತೀಚಿನ ದಿನಗಳಲ್ಲಿ ನೂರಾರು ದೇಶಗಳಲ್ಲಿ ಮಹಿಳೆಯರಿಗೆ ಮತದಾನ ಮಾಡಲು ಅವಕಾಶವಿರಲಿಲ್ಲ.

ಸಮಯ ಕಳೆದಂತೆ, ಹೆಚ್ಚು ಹೆಚ್ಚು ಮಹಿಳೆಯರು ಒಟ್ಟುಗೂಡಿದರು ಮತ್ತು ತಮ್ಮ ಧ್ವನಿಯನ್ನು ಕೇಳಿದರು. ಮತದಾನದ ಹಕ್ಕನ್ನು ಗಳಿಸಿ ಸಮಾಜದಲ್ಲಿ ಮಹಿಳೆಯರ ಸ್ಥಾನವನ್ನು ಗಣನೀಯವಾಗಿ ಎತ್ತಿದರು.ಮಹಿಳೆಯರ ಮತದಾನದ ಹಕ್ಕುಗಳನ್ನು ಬೆಂಬಲಿಸಲು ಪ್ರತಿದಿನ ಪ್ರಚಾರ ಮಾಡುವ ಅನೇಕ ಮತದಾರರ ಚಳುವಳಿಗಳು ಇದ್ದವು.ಯಾವುದೇ ಮಹಿಳೆ ಆರ್ಥಿಕವಾಗಿ ಸ್ವತಂತ್ರಳಾಗದಿದ್ದರೆ ಸಬಲಳಾಗುವುದಿಲ್ಲ. ಮಹಿಳೆಯರು ಬಯಸಿದ ವಸ್ತುಗಳನ್ನು ಪಡೆಯಲು ತಮ್ಮ ತಂದೆ ಅಥವಾ ಗಂಡನ ಮೇಲೆ ಅವಲಂಬಿತರಾಗುವ ದಿನಗಳು ಹೋಗಿವೆ.

20 ನೇ ಶತಮಾನದಿಂದ ಮಹಿಳೆಯರು ಉದ್ಯೋಗಗಳಿಗೆ ಸೇರಲು ಹೆಚ್ಚಿನ ಅವಕಾಶಗಳನ್ನು ಪಡೆದರು.ಆದಾಗ್ಯೂ, ಅದೇ ಸಮಯದಲ್ಲಿ ಇಂಗ್ಲೆಂಡ್‌ನ ಅನೇಕ ಮಹಿಳೆಯರು ಕುಟುಂಬವನ್ನು ಬೆಂಬಲಿಸಲು ಕೆಲಸದ ಸ್ಥಳದಲ್ಲಿ ಮತ್ತು ಮನೆಯಲ್ಲಿ ಕೆಲಸ ಮಾಡಲು ಒತ್ತಾಯಿಸಲಾಯಿತು. ಎರಡನೆಯ ಮಹಾಯುದ್ಧದ ನಂತರ, ಮಹಿಳೆಯರು ತಮ್ಮದೇ ಆದ ಉದ್ಯೋಗಗಳಿಗೆ

ಸೇರಲು ನಿರ್ಧರಿಸಿದರು.ಇಂದು ಮಹಿಳೆಯರಿಗೆ ಹೆಚ್ಚು ಹೆಚ್ಚು ಉದ್ಯೋಗಗಳು ತೆರೆದುಕೊಳ್ಳುತ್ತಿವೆ. ಮನೆಯಲ್ಲೂ ಮಹಿಳೆಯರು ಮಹತ್ವದ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಪಡೆದಿದ್ದಾರೆ.ಸಮಾಜದ ಕೆಳಸ್ತರದಲ್ಲಿರುವ ಮಹಿಳೆಯರು ಸಬಲೀಕರಣಗೊಳ್ಳದಿದ್ದರೆ ಮಹಿಳಾ ಸಬಲೀಕರಣ ಯಶಸ್ವಿಯಾಗಲು ಸಾಧ್ಯವಿಲ್ಲ.

21 ನೇ ಶತಮಾನದ ಆರಂಭದ ನಂತರ, ತಳ ಮಟ್ಟಕ್ಕೆ ಸೇರಿದ ಮಹಿಳೆಯರು ಪುರುಷರಿಗೆ ಮಾತ್ರ ಮೀಸಲಾದ ಅನೇಕ ವೃತ್ತಿಪರ ಕೆಲಸಗಳನ್ನು ಕಂಡುಕೊಂಡಿದ್ದಾರೆ.ಇಂದು ಅನೇಕ ಮಹಿಳಾ ಮೇಸ್ತ್ರಿಗಳು, ಬಸ್ ಚಾಲಕರು, ಪೆಟ್ರೋಲ್ ಪಂಪ್ ಅಟೆಂಡರ್‌ಗಳು, ರೈತರು ಇತ್ಯಾದಿ. ಮತ್ತು ಈ ಎಲ್ಲಾ ಮಹಿಳೆಯರು ತಮ್ಮ ಕೆಲಸವನ್ನು ಅತ್ಯಂತ ಉತ್ತಮವಾಗಿ ಮಾಡುತ್ತಿದ್ದಾರೆ.

## ಭಾರತದಲ್ಲಿ ಮಹಿಳಾ ಸಬಲೀಕರಣ

ಭಾರತದಲ್ಲಿ ಮಹಿಳಾ ಸಬಲೀಕರಣವನ್ನು ಇತರ ದೇಶಗಳಲ್ಲಿ ಹೋಲಿಸಲಾಗುವುದಿಲ್ಲ. ವೈದಿಕ ಯುಗದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಗೌರವವಿತ್ತು.ಮಹಿಳಾ ಶಿಕ್ಷಣದತ್ತ ಗಮನ ಹರಿಸಲೇ ಇಲ್ಲ. 'ಸಹಧರ್ಮಿಣಿ' ಎಂಬ ಪದವು ವೇದಕಾಲದಿಂದಲೂ ತಿಳಿದಿತ್ತು. ಸಹಧರ್ಮಿಣಿ ಎಂದರೆ – ಸಮಾನ ಪಾಲುದಾರ.ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಮಹಿಳೆಯರು ಗೌರವ, ಶಿಕ್ಷಣ ಮತ್ತು ಗೌರವವನ್ನು ಅನುಭವಿಸುತ್ತಿದ್ದರು ಎಂಬುದು ಬಹಳ ಸ್ಪಷ್ಟವಾಗಿದೆ.ಸಮಯ ಕಳೆದಂತೆ ಭಾರತೀಯ ಸಂಸ್ಕೃತಿಯು ಸಂಪ್ರದಾಯವಾದಿ ಮಧ್ಯಪ್ರಾಚ್ಯ ಮತ್ತು ಬ್ರಿಟಿಷ್ ಸಂಸ್ಕೃತಿಯಿಂದ ಕಲುಷಿತಗೊಂಡಿತು. ಪರಿಣಾಮವಾಗಿ, ಮಹಿಳೆಯರು ಅನುಭವಿಸುವ ಅಧಿಕಾರ ಮತ್ತು ಗೌರವವನ್ನು ಕಳೆದುಕೊಂಡರು.

ಸ್ವಾತಂತ್ರ್ಯಾನಂತರ ಕ್ರಮೇಣ ಮಹಿಳೆಯರು ಕಳೆದುಕೊಂಡ ಅಧಿಕಾರವನ್ನು ಮರಳಿ ಪಡೆಯಲಾರಂಭಿಸಿದರು. ಇಂದು ಮಹಿಳೆಯರು ಎಲ್ಲೆಡೆ ಇದ್ದಾರೆ.ದೇಶವು ತನ್ನ ಮಹಿಳಾ ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರನ್ನು ಕಂಡಿತು, ದೇಶವು ಸೈನಾ ನೆಹ್ವಾಲ್ ಅಥವಾ ಪಿ.ಟಿ ಉಷಾ ಅವರಂತಹ ಅನೇಕ ಪ್ರಖ್ಯಾತ ಮಹಿಳಾ ಕ್ರೀಡಾಪಟುಗಳನ್ನು ಹೊಂದಿದೆ, ದೇಶವು ಎ. ಚಟರ್ಜಿ ಅಥವಾ ಬಿ ವಿಜಯಲಕ್ಷ್ಮಿ ಅವರಂತಹ ಪ್ರತಿಭಾವಂತ ಮಹಿಳಾ ವಿಜ್ಞಾನಿಗಳಿಂದ ಆಶೀರ್ವದಿಸಲ್ಪಟ್ಟಿದೆ.ಭಾರತದಲ್ಲಿ ಮಹಿಳೆಯರು ಯಾವುದೇ ಹಿಂಜರಿಕೆಯಿಲ್ಲದೆ ಯುದ್ಧ ಪಡೆಗಳನ್ನು ಸೇರುತ್ತಿದ್ದಾರೆ. ಆದಾಗ್ಯೂ, ಭಾರತದಲ್ಲಿ ಪಿತೃಪ್ರಭುತ್ವದ ಹಿಡಿತದಿಂದ ಹೊರಬರಲು ಇನ್ನೂ ಕಷ್ಟಪಡುತ್ತಿರುವ ಅನೇಕ ಮಹಿಳೆಯರು ಇದ್ದಾರೆ – ವಿಶೇಷವಾಗಿ ಗ್ರಾಮೀಣ ವಲಯದಲ್ಲಿ.ಈ ಮಹಿಳೆಯರನ್ನು ಧ್ವನಿ ಎತ್ತಲು, ಪ್ರತಿಭಟಿಸಲು ಮತ್ತು ಅಧಿಕಾರಿಗಳಿಂದ ಸಹಾಯ ಪಡೆಯಲು ಒತ್ತಾಯಿಸುವುದು ಸಶಕ್ತ ಮಹಿಳೆಯರ ಕರ್ತವ್ಯವಾಗಿದೆ.

ಉಪಸಂಹಾರ: ಹಿಂದೆಂದಿಗಿಂತಲೂ ಇಂದು ಮಹಿಳೆಯರು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ. ಅವರು ಸ್ವಂತವಾಗಿ ನಿರ್ಧರಿಸಬಹುದು. ಆದಾಗ್ಯೂ, ಹೋಗಲು ಬಹಳ ದೂರವಿದೆ. ಧರ್ಮವನ್ನು ಹತ್ತಿಕ್ಕಲು ಬಳಸುತ್ತಿರುವುದನ್ನು ವಿರೋಧಿಸಿ ಮಹಿಳೆಯರು ಪ್ರತಿಭಟಿಸಬೇಕು.ಎಲ್ಲಾ ಮಿಲಿಟರಿ ಸ್ಥಾನಗಳು ಮಹಿಳೆಯರಿಗೆ ಮುಕ್ತವಾಗಿಲ್ಲ. ಚಿತ್ರರಂಗದಲ್ಲಿ, ಕ್ರೀಡೆಯಲ್ಲಿ ಮತ್ತು ಸಾಮಾನ್ಯ ಉದ್ಯೋಗಗಳಲ್ಲಿ ವೇತನದ ಅಂತರವಿದೆ.ಮಹಿಳೆಯರು ಅನಾದಿಕಾಲದಿಂದ ಎದುರಿಸುತ್ತಿರುವ ಎಲ್ಲಾ ಅನ್ಯಾಯಗಳನ್ನು ಬಹಿಷ್ಕರಿಸಲು ಕಷ್ಟಪಟ್ಟು ಗಳಿಸಿದ ಶಕ್ತಿಯನ್ನು ಬಳಸಬೇಕಾಗಿದೆ.